ಒಳಗೊಳ್ಳುವುದು ಸಹಜವಾಗಿದೆ. ಕುಟುಂಬದ ಯಜಮಾನನು ಕುಟುಂಬದ ಮಹಿಳೆಯರನ್ನು ಸಮಾನವಾಗಿ ಪರಿಗಣಿಸುವುದಿಲ್ಲ. ನಿರ್ಣಯದ ಅಧಿಕಾರವನ್ನು ಪುರುಷ ತನ್ನದೇ ಕೈಯಲ್ಲಿ ಇಟ್ಟುಕೊಂಡಿರುತ್ತಾನೆ. ಆದ್ದರಿಂದಲೇ ತನ್ನ ಕುಟುಂಬದ ಯುವಕ ಯುವತಿಯರು ಸಹ ತಮ್ಮ ಜಾತಿಯಲ್ಲಿಯೂ ತಮ್ಮ ಬಾಳಸಂಗಾತಿಯ ಆಯ್ಕೆ ಮಾಡಿಕೊಳ್ಳಲು ಬಿಡುವುದಿಲ್ಲ. ಈ ಪುರುಷಪ್ರಧಾನ ಸರ್ವಾಧಿಕಾರವೆಂಬುದು ವ್ಯಕ್ತಿಯಿಂದ ಸಮಾಜದ ಎಲ್ಲ ವಿಭಾಗಗಳ ಮೇಲೆ ತನ್ನ ಕಬಂಧಬಾಹು ವಿಸ್ತರಿಸಿ ಬಿಗಿಗೊಳಿಸಿದೆ. ಆದ್ದರಿಂದಲೇ ಮಂಡ್ಯದ ಯುವತಿಯನ್ನು ಹೆತ್ತ ತಾಯಿ ಮತ್ತು ಕುಟುಂಬಸ್ಥರ ಮುಂದೆ ಮತ್ತು ಹುಬ್ಬಳ್ಳಿಯ ಮಾನ್ಯಳನ್ನು ಅವಳ ಕುಟುಂಬಸ್ಥರ ಮುಂದೆ ತಂದೆಯಾದವನು ಬರ್ಬರವಾಗಿ ಹತ್ಯೆ ಮಾಡಿದಾಗ ತಾಯಿ ಮತ್ತು ಕುಟುಂಬದ ಇತರ ಸದಸ್ಯರ ಪ್ರತಿಕ್ರಿಯೆಯು ಅಸಹಾಯಕವಾಗಿದ್ದಿರಬಹುದು ಅಥವ ಪೂರಕವಾಗಿದ್ದಿರಬಹುದು ಅಥವಾ ಆಂತರಿಕವಾಗಿ ಅಸಮಾಧಾನದಿಂದಲೂ ಕೂಡಿರಬಹುದು. ಆದರೆ ಪ್ರತಿರೋಧ ವ್ಯಕ್ತಿಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇತ್ತೆಂಬುದು ಸತ್ಯ.

ಪುರುಷ ರಾಜಕಾರಣದಲ್ಲಿ ಮಹಿಳೆಯ ಕುರಿತ ಭಾಷೆ, ಬದುಕು, ಭವಿಷ್ಯ ಸಂಸ್ಕೃತಿ ಮತ್ತು ಆರ್ಥಿಕತೆ ಎಲ್ಲವೂ ಪಕ್ಷಪಾತ ನಿಲುವಿನಲ್ಲಿ ಕಠಿಣತೆಯಲ್ಲಿ ಸಾಗಿದೆ. ಮಹಿಳೆಗೆ ಆಸ್ತಿಯ ಹಕ್ಕು ಸಂವಿಧಾನ ಮಾನ್ಯ ಮಾಡಿದರೂ ಕುಟುಂಬಗಳು ಇದನ್ನು ಜಾರಿಗೊಳಿಸಲು ನಿರಾಕರಿಸುತ್ತಿವೆ. ಈಚೆಗೆ ಸುಪ್ರೀಂ ಕೋರ್ಟು ಕೊಟ್ಟ ನಿರ್ಣಯವು ಅತ್ಯಂತ ತಲ್ಲಣಗೊಳಿಸುವಂತಹದ್ದಾಗಿದೆ. ಏನೆಂದರೆ ಮಹಿಳೆಯು ತನ್ನ ತಂದೆಯ ಇಚ್ಛೆಯ ವಿರುದ್ಧವಾಗಿ ಅನ್ಯ ಜಾತಿ ಧರ್ಮದ ವ್ಯಕ್ತಿಯೊಂದಿಗೆ ಮದುವೆಯಾದರೆ ಅವಳಿಗೆ ತಂದೆಯ ಆಸ್ತಿಯಲ್ಲಿ ಹಕ್ಕಿರುವುದಿಲ್ಲ ಎಂದು. ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಮತ್ತು ಸಮಾಜ, ಕುಟುಂಬ ಎಲ್ಲೆಡೆಯೂ ಹೀಗೆ ಮಹಿಳೆಯರ, ದಲಿತ ದಮನಿತರ, ಯುವಜನರ ಹಕ್ಕುಗಳ ಮೇಲೆ ದಾಳಿಯು ನಿರಂತರವಾಗಿ ಸಾಗಿದೆ. ಇದರ ಹಿಂದಿನ ಮೌಲ್ಯವು ಜಾತಿ ಶ್ರೇಷ್ಠತೆಯ ಅಹಂಕಾರದ ಪ್ರತಿಷ್ಠೆ ಆಗಿದೆ.

## ಪಲ್ಲಟಗೊಳಿಸಲ್ಪಡುತ್ತಿರುವ ತಾತ್ವಿಕತೆ

ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ದಲಿತ ಮಹಿಳೆ, ಅಲ್ಪಸಂಖ್ಯಾತ ಮಹಿಳೆ, ಶೂದ್ರ ಮಹಿಳೆಯರೆಲ್ಲ ವಿಭಿನ್ನ ರೀತಿಯ ಸಂಕಟಗಳನ್ನು ಎದುರಿಸುತ್ತಿರುವರು. ಆದ್ದರಿಂದ ಪಾಳೇಗಾರಿ ಮೌಲ್ಯದ ಕುಟುಂಬದ ಯಜಮಾನನ ತಲೆಯಲ್ಲಿ ಮನುಸ್ಮೃತಿಯ ಶ್ಲೋಕಗಳೇ ತುಂಬಿವೆ. ಮಹಿಳೆಯು ತನ್ನ ಜಾತಿಗಿಂತ ಕೆಳಜಾತಿಯ ಯುವಕನನ್ನು ವರಿಸಿದಲ್ಲಿ ಅವಳನ್ನು ಏನು ಮಾಡಬೇಕು ಎಂಬುದು ಮನುಸ್ಮೃತಿಯ 8ನೇ ಅಧ್ಯಾಯದಲ್ಲಿನ 366ನೇ ಶ್ಲೋಕ ಹೇಳುತ್ತದೆ. ತನ್ನ ಕುಟುಂಬ ಮೇಲ್ಜಾತಿ ಎಂದು ಭಾವಿಸಿದವರಿಗೆ ಬಹುದೊಡ್ಡ ದಾಳಿಕೋರ ಶಕ್ತಿಯಾಗಿ ಮನುಸ್ಮೃತಿ ನಿಲ್ಲುತ್ತದೆ. ಇಲ್ಲಿ ತನ್ನ ಮಗಳು ಮಾನ್ಯಳನ್ನು ಕೊಚ್ಚಿ ಹಾಕಿದ ಪ್ರಕಾಶಗೌಡ ಸಹ ತನ್ನ ಜಾತಿ ಶ್ರೇಷ್ಠವೆಂದು ಭಾವಿಸಿದ್ದರಿಂದಲೇ ಮಗಳನ್ನು ಕೊಂದು ಅವಳ ಗಂಡನ ಮನೆಯವರನ್ನೂ ಹತ್ಯೆ ಮಾಡಲು ಮುಂದಾಗಿದ್ದಾನೆ. ಅತ್ಯಂತ ಚಿಂತಾಜನಕವಾದ ಸಂಗತಿ ಏನೆಂದರೆ ಪ್ರಕಾಶಗೌಡ ಪಾಟೀಲ ಲಿಂಗಾಯತ ಸಮುದಾಯಕ್ಕೆ ಸೇರಿದ ಮನುಷ್ಯ. ಲಿಂಗಾಯತ ಎನ್ನುವುದು ಜಾತಿಯಲ್ಲ. ಅದೊಂದು ತತ್ವ. ಲಿಂಗವನ್ನು ಆಯತ ಮಾಡಿಕೊಂಡವರು ಯಾರೋ ಅವರು ಲಿಂಗಾಯತರು ಎಂಬುದು ವಚನಕಾರರ ನಿಜಾರ್ಥ. ಲಿಂಗವೆಂದರೆ ಏನು? ಜಗತ್ತು ಎಂದರ್ಥ. ಸಕಲ ಜೀವರಿಗೆ ಲೇಸು ಬಯಸುವ ತತ್ವವದು. ತಾರತಮ್ಯದ ಶ್ರೇಣೀಕೃತ ಜಾತಿ ವ್ಯವಸ್ಥೆಯ ವಿರುದ್ಧ ರಾಜಿರಹಿತವಾಗಿ ಸೆಣಸಿ ಪ್ರಾಣವನ್ನೇ ಪಣಕ್ಕಿಟ್ಟು ಸಮಾನತೆಗಾಗಿ ಶ್ರಮಿಸಿ ಲಿಂಗಾಯತ ಎಂಬ ತತ್ವವನ್ನು ಕಟ್ಟಿಕೊಟ್ಟವರು ಶರಣರು. 770 ಅಮರಗಣಂಗಳೆಂಬ ಕಾಯಕ ಜೀವಿಗಳನ್ನು ಒಳಗೊಂಡಿದ್ದು ಲಿಂಗಾಯತ ಎನ್ನುವ ತತ್ವವು. ಆದರೆ ವಿಡಂಬನೆ ಎಂದರೆ ಲಿಂಗಾಯತ ಎಂಬುದು ಈಗ ಜಾತಿಯಾಗಿ ಮಾರ್ಪಡಿಸಲ್ಪಟ್ಟಿರುವುದರಿಂದ ಕಾಯಕ ಜೀವಿಗಳ

# ಮರ್ಯಾದೆಗೇಡು ಹತ್ಯೆಗಳಿಗೂ ಶ್ಲೋಕಗಳಿಗೂ ಏನು ಸಂಬಂಧ

**ಹೀನ ಜಾತಿಸ್ತ್ರೀಯಂ ಮೋಹದುದ್ವಹಂತೋ ದ್ವಿಜಾತಾಯ/**
**ಕುಲಾನ್ಯೇವ ನಯಂತ್ಯಾಶು ಸುಸಂತನಾನಿ ಶೂದ್ರತಾಂ**
ಎಂತಹ ಅನಿವಾರ್ಯ ಸಂದರ್ಭಗಳಲ್ಲಿಯೂ ಬ್ರಾಹ್ಮಣ ಹಾಗೂ ಕ್ಷತ್ರೀಯ ಗಂಡುಗಳು ಶೂದ್ರ ಜಾತಿಯ ಸ್ತ್ರೀಯರನ್ನು ಪ್ರಥಮ ಹೆಂಡತಿ ಎಂದು ಪರಿಗಣಿಸಬಾರದು.

**ಉತ್ತಮಾಂ ಸೇವಮಾನಸ್ತು ಜಘನ್ಯೋ ವಧಮರ್ಹತಿ/**
ಉತ್ತಮ ಜಾತಿಗೆ ಸೇರಿದ ಕನ್ಯೆಯನ್ನು ಭೋಗಿಸಿದವನು ವಧೆಗೆ ಅರ್ಹನಾಗುತ್ತಾನೆ.

**ಜಘನ್ಯಂ ಸೇವಮಾನಾಂ ತು ಸಂಯತಾಂ ವಾಸಯೇದ್ಗೃಹೇ/**
ತನಗಿಂತ ಕೀಳು ಜಾತಿಯವನೊಡನೆ ಸಂಭೋಗ ಬಯಸಿದ ಕನ್ಯೆಯನ್ನು ಮನೆಯಲ್ಲಿಯೇ ಗೃಹಬಂಧನದಲ್ಲಿರಿಸಬೇಕು.

**ಶಯ್ಯಾ ಸನಮಲಂಕಾರಂ ಕಾಮಂ ಕ್ರೋಧಮನಾರ್ಜವಂ/**
**ದ್ರೋಹಭಾವಂ ಕುಚರ್ಯಾಂ ಚ ಸ್ತ್ರೀಭ್ಯೋ ಮನುರಕಲ್ಪಯತ್**
ಮಲಗುವುದು, ಕುಳಿತುಕೊಂಡಿರುವುದು, ಅಲಂಕಾರ, ಕಾಮ, ಕ್ರೋಧ, ಅಪ್ರಾಮಾಣಿಕತೆ, ಪತಿದ್ರೋಹ ದುರ್ನಡತೆ ಇವು ಸ್ತ್ರೀಯರಿಗೆ ಸ್ವಾಭಾವಿಕ ಗುಣಗಳು.

ಮನುಸ್ಮೃತಿಯ ಅಧ್ಯಾಯ 8ರಲ್ಲಿ ಶ್ಲೋಕ ಸಂಖ್ಯೆ 279, 280, 281, 282, 283, 284, 245, 285ರಲ್ಲಿ ಶೂದ್ರರು ಬ್ರಾಹ್ಮಣರಿಗೆ ಅವಮಾನ, ದಾಳಿ ಮಾಡಿದರೆ ಶೂದ್ರರ ಯಾವ್ಯಾವ ಅಂಗಾಂಗಗಳನ್ನು ಹೇಗೆ ಕತ್ತರಿಸಬೇಕು ಎಂಬುದನ್ನು ವಿವರಿಸುತ್ತದೆ. ಇದೇ ಸಂದರ್ಭದಲ್ಲಿ ಇದೇ ಅಧ್ಯಾಯದಲ್ಲಿ (8) ಹೇಳುವುದೇನೆಂದರೆ ಬ್ರಾಹ್ಮಣನು ಏನೇ ತಪ್ಪು ಅಪರಾಧ, ಹಲ್ಲೆ ಅವಮಾನ ಮಾಡಿದರೂ ಅವನನ್ನು ಶಿಕ್ಷಿಸಬಾರದು ಎಂದು ಹೇಳುತ್ತದೆ. ದಂಡ ಹಾಕಬಾರದು, ಕೋಪಗೊಳ್ಳಬಾರದು ಎಂದು ಹೇಳುತ್ತದೆ. (ಶ್ಲೋಕ ಸಂಖ್ಯೆ 341, 380, 381, 313 ಇತ್ಯಾದಿ) ಶೂದ್ರರು, ಚಾಂಡಾಲರು ಸಂಪತ್ತು ಹೊಂದಿರಬಾರದು. ಆದರೆ ಬ್ರಾಹ್ಮಣರು ಸಂಪತ್ತಿಗೆ ಒಡೆಯರು ಎಂದು ಮನುಸ್ಮತಿ ಅನೇಕ ಶ್ಲೋಕಗಳ ಮೂಲಕ ಹೇಳುತ್ತದೆ.

ಮೇಲಿನ ಎಲ್ಲ ಉಲ್ಲೇಖಗಳನ್ನು ಮನುಸ್ಮೃತಿಯಿಂದ ತೆಗೆದುಕೊಳ್ಳಲಾಗಿದೆ. ಈಗೇಕೆ ಇದು ನೆನಪಾಯಿತು? ಏಕೆಂದರೆ ಹೆಚ್ಚುತ್ತಿರುವ ಮರ್ಯಾದೆಗೇಡು ಹತ್ಯೆಗಳಿಗೂ ಈ ಶ್ಲೋಕಗಳಿಗೂ ಸಂಬಂಧವಿದೆ. ಸಮಾಜವನ್ನು ಆವರಿಸಿಕೊಂಡು ಮನಸುಗಳನ್ನು ಆಳುತ್ತಿರುವ ಇವುಗಳು ಬಾಳಿ ಬದುಕಬೇಕಾದ ಹೂವುಗಳನ್ನು ಹೊಸಕುತ್ತಿವೆ. ಮೇಲಿನ ಎಲ್ಲ ಕಟ್ಟಳೆಗಳನ್ನು ಸ್ವತಃ ಬ್ರಹ್ಮನೇ ನಿರೂಪಿಸಿದ್ದಾನೆ ಎಂದು ಮನುಸ್ಮತಿ ಹೇಳಿದೆ.

